mate because technical opinion was not in favour of the restoration of this tank.

Sri H. M. CHANNABASAPPA.—Without an estimate, how did the technical department give a decision that it is not desirable to restore the tank?

Mr. SPEAKER.—Estimates are prepared only in respect of tanks which are considered desirable to restore.

Sri H. M. CHANNABASAPPA. — To arrive at the decision that it is desirable or not to restore them there must be an estimate.

Mr. SPEAKER.—If it is desirable to restore a tank, only then they prepare an estimate.

Sri H. M. CHANNABASAPPA.—How many tanks can this desilting unit desilt per year?

The Hon'ble Sri T. MARIAPPA.—It depends upon various factors: upon the workshop position where we have to repair these bulldozers, the speed with which we can move them from one place to the other and the speed with which these desilting operations can be successfully completed. Therefore we have assigned these units to several districts and after some experience is gained we can say whether the work is speedily completed or otherwise.

Sri H. M. CHANNABASAPPA.—Are the Government aware that the need for desilting by taxi-excavators and bulldozers is more in malnad parts where there is no labour?

The Hon'ble Sri T. MARIAPPA.—It depends on various factors as I already said. In fact I have sent a bulldozer to Shimoga; they have not used it because it does not dry soon. it takes a long time. March and April will be the best working season. That also should be taken into consideration.

Sri H. M. CHANNABASAPPA.—Are the Government aware that within the short period the desilting operations have taken place, the desilting units cannot work there for many months in the year?

The Hon'ble Sri T. MARIAPPA.—Sir, in Maidan parts we know that the rainy season begins late and we do not get water in some tanks even late in August and September. So we can naturally work for a longer period. But in Malnad the working season is naturally less.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).—ಕೆರೆಗಳ ಹೂಳು ತೆಗೆಸಿರುವುದರಿಂದ ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಸಹಾಯವಾಗಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ಉದ್ದೇಶದಿಂದಲೇ ಮಾಡಿರುವುದು.

ಶ್ರೀ ಡಿ. ಎಂ. ಸಿದ್ದಯ್ಯನವರು.—ಹಾಗಾದರೆ ಜೊಕ್ಕಸಂದ್ರ ಕೆರೆಗೆ 30,200 ರೂಪಾಯಿ ಖರ್ಚು ಮಾಡಿದ್ದೀರಿ, ಇದರಿಂದ ಎಷ್ಟು ಹೆಚ್ಚು ಆಹಾರ ಧಾನ್ಯ ಬಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈ ಕೆರೆಯನ್ನು ಹೂಳು ತೆಗೆಸಿದ ಮೇರೆ ಇದರ ಅಚ್ಚುಕಟ್ಟು ಜಮೀನಿಂದ ಎಷ್ಟು ಹೆಚ್ಚು ಆಹಾರಧಾನ್ಯ ಬಂದಿದೆಯೆಂಬುದನ್ನು ತಿಳಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಡಿ. ಎಂ. ಸಿದ್ದಯ್ಯನವರು.—ಮೈಸೂರು ಜಿಲ್ಲೆಯಲ್ಲಿ ಅನೇಕ ಕೆರೆಗಳಿಗೆ ಹೂಳು ತೆಗೆಸದೇಯಿರುವುದರಿಂದ ಹೆಚ್ಚು ಆಹಾರ ಬೆಳೆಯಲು ಕಷ್ಟವಾಗಿದೆಯೆಂದು ಹೇಳಿದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ಜಿಲ್ಲೆಯಲ್ಲಿ ಜನ ಸಹಾಯದಿಂದ ಬೇಕಾದಷ್ಟು ಕೆರೆಗಳ ಹೂಳು ತೆಗೆಸಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಈಸಾರಿ ಒಂದು ಯೋಜನೆಯನ್ನಿಟ್ಟುಕೊಂಡು ಮೂರು ಜಿಲ್ಲೆಗಳ ಕೆರೆಗಳನ್ನು ನೇರಿಸಲಾಗಿದೆ. ಇದರಲ್ಲಿ ಮೈಸೂರು ಜಿಲ್ಲೆಯ ಕೆರೆಗಳನ್ನೂ ಸೇರಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಲೋಚನೆ ಮಾಡುತ್ತೇವೆ.

Supply of Rubble to Tunga and Lakkavalli Projects.

*Q.—217. **Sri L. H. THIMMA BOI** (Chikmagalur District—Depressed Class).—

Will the Government be pleased to state:—

(*a*) whether rubble is being conveyed to the Tunga and Lakkavalli projects;

(*b*) the rate given for conveyance per unit per mile in both the projects;

(*c*) at what different leads the material is available in both the projects (in detail)?

A.—**The Honb'le Sri T. MARIAPPA** (Home Minister).—

(*a*) Yes.

(THE HON'BLE SRI T. MARIAPPA).

(*b*) An exclusive rate for conveyance alone, in the case of the Tunga Project has not been fixed up, in view of the comparatively small quantity of rubble collection.

An over-all rate of Rs. 41–15–0 per 100 c.ft (as per quotations) which includes all the items of (1) quarrying, (2) blasting charges, (3) loading and unloading, (4) conveyance and stacking at the workspot, has been fixed up, irrespective of the lead. The rate for conveyance alone is not susceptible of being separated.

In case of the Bhadra Project, involving a very huge quantity of rubble collection, and naturally a number of quarries at varying leads, a separate rate for conveyance alone has been fixed up. These are as under. Separate rates for other items are being paid.

No.	*Lead in miles*	*Conveyance Charges.* Rs.	a.	p.
1	½ to 1	10	0	0
2	1½	11	0	0
3	2	12	0	0
4	2½	13	0	0
5	3	14	0	0
6	3½	15	0	0
7	4	16	0	0
8	4½	17	0	0
9	5	18	0	0
10	5½	19	0	0
11	6	20	0	0
12	6½	21	4	0
13	7	22	8	0
14	7½	23	12	0
15	8	25	0	0

(*c*) *Tunga Anicut Project.*—The rubble quarries are situated 1½ to 6 miles from the works.

Bhadra Project.—They are situated ½ to 8 miles distance from the workspot.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತುಂಗ ಮತ್ತು ಲಕ್ಕವಳ್ಳಿ ಪ್ರಾಜೆಕ್ಟುಗಳಲ್ಲಿ ರಬಲ್ ಸರಬರಾಜಿಗೆ ಕೊಟೇಷನ್ ಕರೆದಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, ಕರೆದಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಎರಡು ಕಡೆಗಳಲ್ಲಿ ಬಂದ ಕೊಟೇಷನ್‌ಗಳಲ್ಲಿ ಅತ್ಯಂತ ಕಡಿಮೆಯಾಗಿದ್ದುದು ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಬೇರೆ ಬೇರೆ ಲೀಡ್‌ಗಳಿವೆ. ಅರ್ಧ ಮೈಲಿಯಿಂದ ಎಂಟು ಮೈಲುಗಳವರೆಗೆ ಇದೆ. ಆದುದರಿಂದ ವ್ಯತ್ಯಾಸವಿರುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಕೊಟೇಷನ್ ಬಂದದ್ದರಲ್ಲಿ ಯಾವ ಕೊಟೇಷನ್ ಅತ್ಯಂತ ಕಡಿಮೆಯಾಗಿತ್ತೋ ಅದರಲ್ಲಿ ಕೇಳಿದ್ದ ದರವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನನಗೆ ಜ್ಞಾಪಕವಿರುವ ಹಾಗೆ 100 ಕ್ಯೂಬಿಕ್‌ಫೀಟಿಗೆ 16 ರೂಪಾಯಿ ಇದೆ ಎಂದು ಕಾಣುತ್ತದೆ, ಗೊತ್ತಾದ ದರ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಾನು ಕೇಳುವುದು ಈ ಸಂಬಂಧವಾಗಿ ಬಂದಿದ್ದ ಕೊಟೇಷನ್‌ಗಳಲ್ಲಿ ಎಲ್ಲಕ್ಕಿಂತ ಕಡಿಮೆಯಾಗಿದ್ದುದು ಎಷ್ಟು ಎಂದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತುಂಗಾ ಪ್ರಾಜೆಕ್ಟಿನಲ್ಲಿ ಎಷ್ಟು ಯೂನಿಟ್ ರಬಲ್ ಜಮಾ ವಣೆ ಮಾಡಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇತ್ತೀಚಿನ ಅಂಕಿ ಅಂಶಗಳು ನನ್ನಲ್ಲಿಲ್ಲ, ನೋಟೀಸ್ ಬೇಕು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಯಲ್ಲಿ ಎಷ್ಟು ಮಾಡಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಯಲ್ಲಿ ರೇಟು ನಿಗದಿ ಮಾಡುವವರು ಯಾರು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೂಪರಿಂಟೆಂಡಿಂಗ್ ಇಂಜಿನಿಯರವರು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಯಲ್ಲಿ ಅರ್ಧ ಮೈಲಿ, ಒಂದು ಮೈಲಿಗೆ ಒಂದೊಂದು ದುರೇಟನ್ನು ಗೊತ್ತುಮಾಡಿದ್ದಾರೆ, ತುಂಗಾದಲ್ಲಿ ಆ ರೀತಿ ಮಾಡದೆ ಬೇರೆ ಮಾಡಿದ್ದಾರೆ, ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿನ್ನಿವೇತಕ್ಕೆ ತಕ್ಕಂತೆ ಗೊತ್ತುಮಾಡಿದ್ದಾರೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತುಂಗಾದಲ್ಲಿ flat rate ಕೊಟ್ಟಿರುವುದರಿಂದ ಯೂನಿಟ್ಟಿಗೆ ನಾಲ್ಕೈದು ರೂಪಾಯಿನಂತೆ ಸರ್ಕಾರಕ್ಕೆ ನಷ್ಟವಾಗುತ್ತದೆಂಬುದು ಸರ್ಕಾರಕ್ಕೆ ಗೊತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಹಾಗಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—Collection ಗೆ ಯಾವ ದರವನ್ನು ಕೊಟ್ಟಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ವ್ಯತ್ಯಾಸವಾಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ನಾನು ಕೇಳುತ್ತಿರುವುದು conveyance ಗಲ್ಲ collection ಗೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—100 c.ft. ಗೆ 16 ರೂಪಾಯಿ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಎರಡು ಕಡೆಯೂ ಒಂಥೇ ದರವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಭದ್ರ ಪ್ರಾಜೆಕ್ಟಿಗೆ ಅನ್ವಯಿಸುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತುಂಗಾ ಪ್ರಾಜೆಕ್ಟಿನದ್ದೆಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ರೂ. 41–15–0.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ತಾವು ಲಕ್ಕವಳ್ಳಿಗೆ ನಿರ್ಧರಿಸಿರುವ ಪ್ರಕಾರ ತುಂಗಾ ಪ್ರಾಜೆಕ್ಟಿಗೂ ಅದೇರೀತಿ ಮಾಡಿದ್ದರೆ ಅನುಕೂಲವಾಗುತ್ತಿರಲಿಲ್ಲವೇ? ಮತ್ತು ಈ ತುಂಗಾ ಪ್ರಾಜೆಕ್ಟಿನ ಸಮೀಪದಲ್ಲೇ 2-3 ಫರ್ಲಾಂಗುಗಳಲ್ಲಿ ಈ ಕಲ್ಲುಗಳಿರುತ್ತವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಅದಕ್ಕೆ ಉತ್ತರವನ್ನು ಆಗಲೇ ತಿಳಿಸಿದ್ದಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಯಾಯ ಸ್ಥಳಸನ್ನಿವೇಶಗಳ ಮೇಲೆ ಹೋಗುತ್ತದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಆ ಸನ್ನಿವೇಶಗಳೆಲ್ಲಾ ಅನುಕೂಲವಾಗಿದ್ದಾಗ ಏಕೆ ಮಾಡದಾರದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇರೆ ತೊಂದರೆಗಳಿರಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಂಥಾ ತೊಂದರೆಗಳ್ಯಾವುವು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Quotations ಗಳನ್ನು ಕರೆದು ಮಾಡಿದ್ದೆವು. ಅವುಗಳ ಪೈಕಿ ಯಾವುದು ತೀರಾ ಕಮ್ಮಿಯದಾಗಿತ್ತೋ ಅದನ್ನು ನಾವು ಅಂಗೀಕರಿಸಿದ್ದೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಟೆಂಡರುಗಳನ್ನು ಕರೆದು ಮಾಡದೆ ಬೇರೆ ರೀತಿ ಮಾಡಿರುವ ಕಡೆ ಈಗ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರವನ್ನು ಬೇಕಾದರೆ ಪುನರ್ಪರಿಶೀಲನೆ ಮಾಡಲಾಗುತ್ತೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಹಾಗೆ ಬಂದ quotations ಗಳಲ್ಲಿ ತೀರಾ ಕಡಿಮೆಯದನ್ನು ಸಹ ಅಂಗೀಕಾರ ಮಾಡಿರುವುದಿಲ್ಲವೆಂಬ ಅಂಶವನ್ನೂ ಸಹ ಪುನಃ ಪರಿಶೀಲಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲಿ; ಎಲ್ಲವನ್ನೂ ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಎಷ್ಟೆಷ್ಟು ದೂರದಿಂದ ಈ ಎರಡು ಪ್ರಾಜೆಕ್ಟುಗಳಿಗೂ ಬೇಕಾದ ಕಲ್ಲುಗಳು ದೊರೆಯುತ್ತಿವೆಯೆಂದು ಕೇಳಿರತಕ್ಕ ಪ್ರಶ್ನೆಗೆ, ಲಕ್ಕವಳ್ಳಿಗೆ ಮಾತ್ರ ಇಷ್ಟಿಷ್ಟು ದೂರವೆಂದು ತಿಳಿಸಿ, ಈ ತುಂಗಾಕ್ಕೆ ಏಕೆ ಅರೀತಿ ತಿಳಿಸಿಲ್ಲ? ಏಕೆ ಲೀಡ್ ಧಾರ್ಜನ್ನು ನಿರ್ಧರಿಸಲಿಲ್ಲಾ?

ಅಧ್ಯಕ್ಷರು.—ಆ ಪ್ರಶ್ನೆಗೆ ಉತ್ತರವನ್ನು ಪ್ರಶ್ನೋತ್ತರಗಳ IIIನೆಯ ಭಾಗದಲ್ಲಿ (ಬಿ) ಉತ್ತರದಲ್ಲಿ ತಿಳಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಕಲ್ಲುಗಳನ್ನು ಸಾಗಿಸಬೇಕಾದರೆ ಒಂದು ಲೀಡ್ ನಿರ್ಧಾರಮಾಡದೆ ಇದನ್ನು ಪಿ. ಡಬ್ಲು. ಡಿ.ನವರು ಎಷ್ಟೆಷ್ಟು ಮೈಲಿಯಿಂದ ಬರುತ್ತೆಂಬುದನ್ನು ತಿಳಿಯದಿದ್ದರೆ ರೂಲ್ಸು ಪ್ರಕಾರ ಇದನ್ನು ನಿಗದಿ ಮಾಡಲು ಹೇಗೆ ಸಾಧ್ಯ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ತಿಳಿಸಲಾಗಿದೆ. $1\frac{1}{2}$ ಮೈಲಿಯಿಂದ ಕೆಲವುಕಡೆ 5 ಮೈಲಿಗಳಾಗುತ್ತೆ, ಕೆಲವುಕಡೆ 6 ಮೈಲಿಗಳಾಗುತ್ತೆಂದು ಉತ್ತರದಲ್ಲೇ ತಿಳಿಸಲಾಗಿದೆ. ಪ್ರಶ್ನೆಗೆ ಒದಗಿಸಿರತಕ್ಕ (ಸಿ) ಭಾಗದ ಉತ್ತರದಲ್ಲಿ ನೋಡಿ $1\frac{1}{2}$ ಯಿಂದ 6 ಮೈಲಿಗಳತನಕ ಇರುತ್ತೆಂದು ನಿರ್ಧರವಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಅಂದಮೇಲೆ ಈ ಲೀಡ್ ಧಾರ್ಜನ್ನು ಎರಡು ಪ್ರಾಜೆಕ್ಟುಗಳಿಗೂ ಒಂದೇ ದರದಲ್ಲಿ ಕೊಡಲಾಗುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎರಡಕ್ಕೂ ವ್ಯತ್ಯಾಸವಿದೆಯೆಂದು ತಿಳಿಸಿದ್ದೇನೆ. ಅಲ್ಲಿರತಕ್ಕ ಮತ್ತು ಇಲ್ಲಿರತಕ್ಕ ಎರಡು ಸನ್ನಿವೇಶಗಳನ್ನೂ ನೋಡಿಕೊಂಡು ಕೆಲಸ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕ್ವಾರೀಗಳು ಎಲ್ಲೆಲ್ಲಿರುತ್ತವೆಂಬುದು ಸರ್ಕಾರಕ್ಕೆ ಗೊತ್ತಿಲ್ಲದೇಇರುವ ಕಾರಣ ಅವರು ಇಂಥಾ ಕೆಲಸಗಳಿಗೆಲ್ಲಾ ಟೆಂಡರುಗಳನ್ನು ಕರೆಯುವುದು ಉತ್ತಮವಾಗಿದ್ದರೂ ಹಾಗೇಕೆ ಮಾಡಲಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು quotations ಕರೆದು ಮಾಡಿದ್ದೆವು. ಅದರಂತೆ ಅದನ್ನು ಈಗ ಮಾಡಲಾಗಿದೆ ಮತ್ತು ಕ್ವಾರೀಗಳು ಎಲ್ಲೆಲ್ಲಿರುತ್ತವೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆ. ಅಷ್ಟೇ ಅಲ್ಲದೆ ನುರ್ಕಿ ಮಾರ್ಟರಿಗಿಂತ lime and stone ಮಾರ್ಟರೇ ಉತ್ತಮವಾದುದಾದ್ದರಿಂದ, ಅದಕ್ಕೆ ಹಾಕತಕ್ಕ ಸುಣ್ಣದಕಲ್ಲನ್ನು ಸಹ ಪರೀಕ್ಷೆಮಾಡಿ ಅದನ್ನು ಉಪಯೋಗಿಸುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಟೆಂಡರುಗಳನ್ನು ಕರೆಯುವುದರಲ್ಲಿ ತಮಗೇನು ತೊಂದರೆ ಇದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Quotations ಕರೆದು ಮಾಡಿದ್ದೇವೆಂದು ಆಗಲೇ ತಿಳಿಸಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಟೆಂಡರನ್ನು ಕರೆದು ಕೆಲಸಮಾಡಿದ್ದರೆ, ದೇಶದ ನಾನಾ ಭಾಗದಲ್ಲಿ ಇದು ಪ್ರಚಾರಕ್ಕೆ ಬಂದು ಜನರು ತಾನು ಮುಂದು, ನಾನು ಮುಂದು ಎಂದು ಮುಂದೆ ಬಂದಾಗ ಒಂದು ಪೈಪೋಟಿ ಹುಟ್ಟಿ ಅದರಿಂದ ಸರ್ಕಾರಕ್ಕೆ ಹೆಚ್ಚಿನಲಾಭ ಉಂಟಾಗುವುದಿಲ್ಲವೇ?

The Hon'ble Sri T. MARIAPPA—It is purely a matter of opinion.

Sri B. S. Narasinga Rao, Adviser for Public Works Department.

*Q.—218. Sri L. H. THIMMA BOI (Chikmagalur District—Depressed Class).—

Will the Government be pleased to state :—

(*a*) whether Sri B. S. Narasinga Rao, Adviser for Public Works Department, is regarded as in service ;

(*b*) if so, whether it should be regarded that he is in his extension ;

(*c*) if not regarded that he is in his extension, whether he is entertained to give only advice to the department ;

(*d*) whether he is permitted to be in direct charge of Tunga, Lakkavalli and Nugu Projects ;

(*e*) if so, under what rules of the Service Regulations ;

---

* Copy placed in the Assembly Library.